## ನಾರಾಯಣ ನೇತ್ರಾಲಯದಲ್ಲಿ...

**ಬೆಂಗಳೂರಿನ ನಾರಾಯಣ ನೇತ್ರಾಲಯದಲ್ಲಿ ಕಣ್ಣಿನ ಕ್ಯಾನ್ಸರ್‌ಗೆ ಉತ್ತಮ ಚಿಕಿತ್ಸೆ ಲಭ್ಯವಿದೆ. ಕಳೆದ 10 ವರ್ಷಗಳಲ್ಲಿ ಒಟ್ಟು 220 ಕಣ್ಣಿನ ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ. ಶೇ. 90ರಷ್ಟು ರೋಗಿಗಳು ತೀವ್ರ ಬಡತನದ ಹಿನ್ನೆಲೆಯಿಂದ ಬಂದವರಾಗಿದ್ದುದರಿಂದ ಅವರಿಗೆ ಅತಿ ಕಡಿಮೆ ದರದಲ್ಲಿ ಹಾಗೂ ಉಚಿತವಾಗಿ ಚಿಕಿತ್ಸೆ ನೀಡಿದ್ದೇವೆ. ಹೀಗಾಗಿ ಚಿಕಿತ್ಸೆ ಪಡೆಯಲು ಹಿಂಜರಿಯಬಾರದು ಎಂದು ಹೇಳುತ್ತಾರೆ ಡಾ. ಭುಜಂಗ ಶೆಟ್ಟಿ.**

ರೆಟಿನೊಬ್ಲಾಸ್ಟೊಮಾಕ್ಕೆ ಪ್ರಮುಖ ಕಾರಣ ಆನುವಂಶೀಯತೆ. ತಂದೆ–ತಾಯಿಯರಲ್ಲಿ ಕಣ್ಣಿನ ಕ್ಯಾನ್ಸರ್ ಇದ್ದರೆ ಮಕ್ಕಳಲ್ಲಿಯೂ ಇದು ಕಾಣಿಸಿಕೊಳ್ಳುವ ಸಾಧ್ಯತೆ ಅತ್ಯಧಿಕ.

‘ಗರ್ಭಿಣಿಯಾಗಿರುವಾಗಲೇ ಹುಟ್ಟಲಿರುವ ಮಗುವಿನ ಕಣ್ಣಿನಲ್ಲಿ ರೆಟಿನೊಬ್ಲಾಸ್ಟೊಮಾ ಇದೆಯೇ ಎಂಬುದನ್ನು ಪತ್ತೆ ಹಚ್ಚಬಹುದು. ಮಗು ಹುಟ್ಟಿದ ಕೂಡಲೇ ಕಣ್ಣುಗಳ ಪರೀಕ್ಷೆ ಮಾಡಿ ಕ್ಯಾನ್ಸರ್‌ಕಾರಕ ಕಣಗಳಿವೆಯೇ ಎಂಬುದನ್ನು ಗುರುತು ಹಿಡಿಯಬಹುದು. ಒಂದು ವೇಳೆ ಇದೆ ಎಂಬುದು ಗೊತ್ತಾದರೆ ಅಲ್ಲಿಯೇ ಚಿಕಿತ್ಸೆ ನೀಡಿ ಕ್ಯಾನ್ಸರ್ ಕಣಗಳನ್ನು ನಾಶಪಡಿಸಬಹುದು. ಬೇಗನೇ ಪತ್ತೆ ಹಚ್ಚಿದರೆ ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಿದೆ’ ಎನ್ನುತ್ತಾರೆ ಈ ನೇತ್ರತಜ್ಞರು.

‘ಕಣ್ಣಿನೊಳಗೆ ಬಿಳಿ ಭಾಗ ಅಥವಾ ಲ್ಯೂಕೊಕೊರಿಯ ಕಾಣಿಸಿಕೊಳ್ಳುತ್ತದೆ. ಇತರ ಲಕ್ಷಣಗಳೆಂದರೆ ಮೆಳ್ಳೆಗಣ್ಣು, ಕೆಂಪಾಗಿ ನೋವಿನಿಂದ ಕೂಡಿದ ಕಣ್ಣುಗಳು, ದೃಷ್ಟಿಯಲ್ಲಿ ದೋಷ ಇದರ ಸಾಮಾನ್ಯ ಲಕ್ಷಣ. ಜೆನೆಟಿಕ್ ಕೌನ್ಸೆಲಿಂಗ್, ಕಿಮೊಥೆರಪಿ, ಲೇಸರ್ ಥೆರಪಿ, ಫೋಟೊಕೋಗ್ಯುಲೇಷನ್ ಅಥವಾ ಕ್ರೈಯೊಥೆರಪಿ ಮುಂತಾದ ಚಿಕಿತ್ಸೆಗಳನ್ನು ಕಣ್ಣಿನ ಕ್ಯಾನ್ಸರ್ ಚಿಕಿತ್ಸೆಯಲ್ಲಿ ಬಳಸಲಾಗುತ್ತದೆ. ಕ್ಯಾನ್ಸರ್ ಅಂಶಗಳು ಹೆಚ್ಚು ವ್ಯಾಪಿಸಿದ್ದರೆ ಜೀವ ಉಳಿಸುವ ಸಲುವಾಗಿ ಮಗುವಿನ ಎರಡೂ ಕಣ್ಣುಗಳನ್ನು ತೆಗೆಯಬೇಕಾಗುತ್ತದೆ’ ಎಂದು ಆತಂಕ ವ್ಯಕ್ತಪಡಿಸುತ್ತಾರೆ ಅವರು.

### ಪತ್ತೆ ಹೇಗೆ?

ಕಣ್ಣುಗಳ ಮಧ್ಯದಲ್ಲಿ ಐಬಾಲ್ಸ್ ಕಪ್ಪು ಹಾಗೂ ದುಂಡಗಿರಬೇಕು. ಇದು ಒಂದು ವೇಳೆ ಬಿಳಿ ಇದ್ದರೆ ಕ್ಯಾನ್ಸರ್ ಇದೆ ಎಂದು ತಿಳಿಯಬೇಕು. ಅಲ್ಲದೆ ಮೆಳ್ಳೆಗಣ್ಣು ಕೂಡ ಕೆಲವು ಬಾರಿ ಕ್ಯಾನ್ಸರ್ ಆಗಿ ಪರಿವರ್ತನೆ ಆಗುವ ಅಪಾಯ ಇದೆ. ಒಂದು ಕಣ್ಣಿನಲ್ಲಿ ಬಿಳಿಭಾಗ ಕಂಡು ಇನ್ನೊಂದು ಕಣ್ಣಿನಲ್ಲಿ ಇಲ್ಲದೇ ಇದ್ದರೆ ಒಂದೇ ಕಣ್ಣಿಗೆ ಕ್ಯಾನ್ಸರ್ ಬಂದಿದೆ ಎಂದರ್ಥ. ಇದನ್ನು ತಕ್ಷಣ ಗುಣಪಡಿಸಿಕೊಳ್ಳದಿದ್ದರೆ ಇನ್ನೊಂದು ಕಣ್ಣಿಗೂ ಹರಡುವ ಅಪಾಯ ಇದೆ. ಇದನ್ನು ಹಾಗೇ ಬಿಟ್ಟರೆ ಕ್ಯಾನ್ಸರ್ ಅಂಶ ಇಡೀ ದೇಹ ಆವರಿಸಿ ಮಾರಣಾಂತಿಕವೂ ಆಗಬಹುದು.

### ರೆಟಿನೊಬ್ಲಾಸ್ಟೊಮಾ ಲಕ್ಷಣಗಳು

- ಕಣ್ಣಿನಲ್ಲಿ ಕೆಂಪು ಮತ್ತು ಉರಿಯೂತ
- ಕಣ್ಣಿನ ಕಪ್ಪು ವರ್ತುಲ ಭಾಗದಲ್ಲಿ ಬಿಳಿ ಬಣ್ಣದ ಗೋಚರ
- ಅಸ್ಪಷ್ಟ ದೃಷ್ಟಿ
- ಕಣ್ಣಿನಲ್ಲಿ ವಿಪರೀತ ನೋವು
- ಕಣ್ಣಿನ ಉಬ್ಬುವಿಕೆ

## ಕಣ್ಣಿನ ಕ್ಯಾನ್ಸರ್‌ಗೆ ಒಳಗಾದ ಮಕ್ಕಳು





> ರೆಟಿನೊಬ್ಲಾಸ್ಟೊಮಾಕ್ಕೆ ಆನುವಂಶೀಯತೆಯೇ ಪ್ರಮುಖ ಕಾರಣ. ಇದು ಆರಂಭಿಕ ಹಂತದಲ್ಲಿದ್ದರೆ ಸಂಪೂರ್ಣ ಗುಣಪಡಿಸಬಹುದು.
>
> **-ಡಾ. ಭುಜಂಗ ಶೆಟ್ಟಿ,**
> **ನೇತ್ರ ತಜ್ಞರು**

ಆರಂಭಿಕ ಹಂತದಲ್ಲಿದ್ದರೆ ಲೇಸರ್ ಚಿಕಿತ್ಸೆಯ ಮೂಲಕ ಕ್ಯಾನ್ಸರ್ ಕಣಗಳನ್ನು ಕೊಂದು ಹಾಕಬಹುದು. ಕೊಂಚ ಉಲ್ಬಣಿಸಿದ್ದರೆ ಒಂದು ಕಣ್ಣನ್ನು ತೆಗೆದೇ ಹಾಕಬೇಕಾಗುತ್ತದೆ. ಒಂದುವೇಳೆ ಇನ್ನೂ ಮುಂದಿನ ಹಂತ ತಲುಪಿದ್ದರೆ ಎರಡೂ ಕಣ್ಣುಗಳನ್ನು ತೆಗೆದು ಹಾಕಬೇಕಾಗುತ್ತದೆ. ಇದರಿಂದ ಕ್ಯಾನ್ಸರ್ ಇಡೀ ದೇಹಕ್ಕೆ ವ್ಯಾಪಿಸಿ ಜೀವಹಾನಿಯಾಗುವುದು ತಪ್ಪುತ್ತದೆ.

‘ನಮ್ಮಲ್ಲಿ ಹೆಚ್ಚಿನವರಿಗೆ ಕಣ್ಣಿನ ಕ್ಯಾನ್ಸರ್ ಬಗ್ಗೆ ಅರಿವು ಇಲ್ಲ. ಹೀಗಾಗಿ ಹುಟ್ಟಿದ ಮಗುವಿನ ಕಣ್ಣುಗಳಲ್ಲಿ ಕ್ಯಾನ್ಸರ್ ಲಕ್ಷಣಗಳನ್ನು ಕಡೆಗಣಿಸುತ್ತಾರೆ. ಇದು ಮುಂದೆ ಗಂಭೀರ ಪರಿಣಾಮವಾಗುವ ಅಪಾಯ ಇದೆ. ಸಮಸ್ಯೆ ಉಲ್ಬಣವಾಗಿ ಆಸ್ಪತ್ರೆಗೆ ಹೋಗುವ ಹೊತ್ತಿಗೆ ಪರಿಸ್ಥಿತಿ ಕೈಮೀರಿರುತ್ತದೆ. ಹೀಗಾಗಿ ಮಕ್ಕಳಲ್ಲಿ ಕಾಣಿಸುವ ಸಣ್ಣಪುಟ್ಟ ಕಣ್ಣಿನ ತೊಂದರೆಗಳನ್ನು ನಿರ್ಲಕ್ಷಿಸಲೇಬೇಡಿ. ಕಣ್ಣಿನ ಕ್ಯಾನ್ಸರ್ ಕುರಿತು ಸಾಮಾನ್ಯ ವೈದ್ಯರಿಗೆ ಮಾಹಿತಿಯ ಕೊರತೆ ಇರಬಹುದು. ಇದಕ್ಕಾಗಿ ನುರಿತ ಕಣ್ಣಿನ ತಜ್ಞರಿಗೇ ತೋರಿಸಿ. ಪುಟ್ಟ ಮಕ್ಕಳು ದೃಷ್ಟಿಮಾಂದ್ಯರಾಗುವುದನ್ನು ಯಾವುದೇ ಪೋಷಕರು ಇಷ್ಟಪಡುವುದಿಲ್ಲ. ಸರಿಯಾದ ಸಮಯದಲ್ಲಿ ಚಿಕಿತ್ಸೆ ಪಡೆದರೆ ಅಪಾಯದಿಂದ ಪಾರಾಗಬಹುದು’ ಎಂದು ಸಲಹೆ ನೀಡುತ್ತಾರೆ ಡಾ. ಭುಜಂಗ ಶೆಟ್ಟಿ ಅವರು.

ಮಕ್ಕಳೇ ಕುಟುಂಬದ ಕಣ್ಣು. ಈ ಕಣ್ಣುಗಳೇ ಕಣ್ಣನ್ನು ಕಳೆದುಕೊಂಡರೆ ಇಡೀ ಕುಟುಂಬವೇ ಅಂಧಕಾರದಲ್ಲಿ ಮುಳುಗಿರುತ್ತದೆ. ಹೀಗಾಗಿ ‘ಮುನ್ನೆಚ್ಚರಿಕೆಯೇ ಮದ್ದು’ ಎಂಬ ಮಾತನ್ನು ಸದಾ ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಕ್ಯಾನ್ಸರ್ ಇರಲಿ, ಯಾವುದೇ ಕಾಯಿಲೆ ಬರಲಿ. ಮೊದಲು ತಜ್ಞ ವೈದ್ಯರಿಗೆ ಮಕ್ಕಳನ್ನು ತೋರಿಸಿ ಸೂಕ್ತ ಚಿಕಿತ್ಸೆ ಪಡೆದುಕೊಂಡರೆ ಬದುಕು ನಂದನವನವಾಗುತ್ತದೆ.